# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 1403 |
| **ಮಾನ್ಯ ಸದಸ್ಯರ ಹೆಸರು** | ಶ್ರೀ ಎಂ.ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | 16-03-2026 |
| **ಉತ್ತರಿಸಬೇಕಾದ ಸಚಿವರು** | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರು, ತಜ್ಞರು ಮತ್ತು ನರ್ಸ್‌ಗಳ ಖಾಲಿ ಹುದ್ದೆಗಳು ಶೇಕಡವಾರು ಎಷ್ಟು; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮಕೈಗೊಳ್ಳಲಾಗುತ್ತಿದೆಯೇ;</td><td>ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರು, ತಜ್ಞರು ಮತ್ತು ನರ್ಸ್‌ಗಳ ಖಾಲಿ ಹುದ್ದೆಗಳು ಶೇಕಡವಾರು ಈ ಕೆಳಕಂಡತಿದೆ.
<table>
<tr><th>ಕ್ರ.ಸಂ</th><th>ಹುದ್ದೆ</th><th>ಮಂಜೂರು</th><th>ಕಾರ್ಯನಿರತ</th><th>ಖಾಲಿ</th></tr>
<tr><td>1.</td><td>ವೈದ್ಯರು ಮತ್ತು ತಜ್ಞರು</td><td>6240 (100%)</td><td>4428 (70.96%)</td><td>1812 (29.04%</td></tr>
<tr><td>2.</td><td>ಶುಶ್ರೂಷಾಧಿಕಾರಿಗಳು</td><td>6818 (100%)</td><td>5916 (86.77%)</td><td>902 (13.23%</td></tr>
</table>
</td></tr>
<tr><td>ಆ)</td><td>ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪೂರ್ಣಕಾಲಿಕ ವೈದ್ಯರಿಲ್ಲ; ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞರ ಹುದ್ದೆಗಳು ಖಾಲಿ ಇರುವುದಕ್ಕೆ ಕಾರಣಗಳೇನು;</td><td>ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟು 1820 ವೈದ್ಯರು, ತಜ್ಞ ವೈದ್ಯರುಗಳ ಹುದ್ದೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 649 ಹುದ್ದೆಗಳು ಖಾಲಿ ಇರುತ್ತವೆ.<br><br>
ಇಲಾಖೆಯಲ್ಲಿ ಖಾಲಿಯಿರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಈ ಕೆಳಕಂಡಂತೆ ಕ್ರಮಕೈಗೊಳ್ಳಲಾಗುತ್ತಿದೆ:-<br>
1. ಇಲಾಖೆಯಲ್ಲಿ ಖಾಲಿಯಿರುವ 120 ತಜ್ಞ ವೈದ್ಯರು ಮತ್ತು 100 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ : ಆಇ 625 ವೆಚ್ಚ-5/2024, ದಿನಾಂಕ:06.06.2024ರಲ್ಲಿ ಸಹಮತಿ ನೀಡಿದ್ದು, ಆದರಂತೆ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.<br>
2. The Karnataka compulsory service by candidates completed Medical courses Act, 2012 ಹಾಗೂ ಕಾಲಕಾಲಕ್ಕೆ ಮಾಡಲಾದ ತಿದ್ದುಪಡಿ ಕಾಯ್ದೆ ಹಾಗೂ ಇದರಡಿ ರಚಿಸಲಾದ ನಿಯಮದಡಿ ವೈದ್ಯಕೀಯ ಕೋರ್ಸ್, ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ನ್ನು ಯಾಶಸ್ವಿಯಾಗಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ, ಹುದ್ದೆಗಳ ಲಭ್ಯತೆ ಆಧಾರದ ಮೇಲೆ ಒಂದು ವರ್ಷದ ಕಡ್ಡಾಯ ಸೇವೆಗೆ ನೇಮಿಸಲಾಗುತ್ತಿದೆ.<br>
3. ಆದೇಶ ಸಂಖ್ಯೆ : ಆಕುಕ 619 ಹೆಚ್‌ಎಸ್‌ಹೆಚ್ 2022, ದಿನಾಂಕ : 17/01/2024 ಹಾಗೂ 11/03/2024ರಲ್ಲಿ ಇಲಾಖೆಯಲ್ಲಿ ಖಾಲಿ ಇರುವ 337 ತಜ್ಞ ವೈದ್ಯರು ಮತ್ತು 250 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಕೆಲವೊಂದು ಷರತ್ತುಗಳಿಗೆ ಒಳಪಡಿಸಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ನೀಡಲಾಗಿದೆ.<br>
4. ಸುತ್ತೋಲೆ ಸಂಖ್ಯೆ : ಆಕುಕ 21 ಹೆಚ್‌ಎಸ್‌ಹೆಚ್ 2025, ದಿನಾಂಕ : 08/01/2025 ಮತ್ತು ಸೇರ್ಪಡೆ ಸಂಖ್ಯೆ : HFW/1/PRS/2025, ದಿನಾಂಕ : 25/01/2025 ಮತ್ತು ಪತ್ರ ದಿನಾಂಕ : 29/01/2025ರಲ್ಲಿ ಒಟ್ಟಾರೆಯಾಗಿ 250 ಮಿತಿಯಲ್ಲಿ ಅಗತ್ಯಕ್ಕನುಗುಣವಾಗಿ ಸಾಮಾನ್ಯ ಕರ್ತವ್ಯ</td></tr>
</table>

| | | |
|---|---|---|
| | | ವೈದ್ಯಾಧಿಕಾರಿ/ತುರ್ತು ಚಿಕಿತ್ಸಾ ವೈದ್ಯಾಧಿಕಾರಿ/ಹಿರಿಯ ವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.<br>5. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ವೃಂದದಲ್ಲಿ ಖಾಲಿ ಇರುವ ವಿವಿಧ 320 ಅರೆ ವೈದ್ಯಕೀಯ ಹುದ್ದೆಗಳನ್ನು ಉಳಿಕೆ ಮೂಲ ವೃಂದದಲ್ಲಿ ಖಾಲಿ ಇರುವ 558 ಅರೆ ವೈದ್ಯಕೀಯ ಹುದ್ದೆಗಳ ಭರ್ತಿಗಾಗಿ ಅಧಿಸೂಚನೆ ಸಂಖ್ಯೆ : ಆಕುಕ 709 ಹೆಚ್‌ಎಸ್‌ಎಂ 2017, ದಿನಾಂಕ : 17/05/2022ರಲ್ಲಿ ವಿಶೇಷ ನೇಮಕಾತಿ ಸಮಿತಿಯನ್ನು ರಚಿಸಲಾಗಿದೆ. ಅದರನ್ವಯ ಮೈಕ್ರೋಬಯಾಲಜಿಸ್ಟ್ ಹುದ್ದೆಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯು ದಾಖಲಾಗಿದೆ. ಕಲ್ಯಾಣ ಕರ್ನಾಟಕ ವೃಂದದ ಸೈಕ್ಯಾಟ್ರಿಕ್ ಸೋಷಿಯಲ್ ವರ್ಕರ್-01 ಹಾಗೂ ಸಹಾಯಕ ಕೀಟ ಶಾಸ್ತ್ರಜ್ಞರು-01 ಹುದ್ದೆಗೆ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳ ಪೂರ್ವಾಪರ ಗುಣ ನಡತೆ ಪೊಲೀಸ್ ವರದಿ, ಅಂಕಪಟ್ಟಿ ನೈಜತೆ, ಸಿಂಧುತ್ವ ಪ್ರಮಾಣ ಪತ್ರದ ವರದಿಗಳನ್ನು ಸ್ವೀಕರಿಸಿದ ನಂತರ ನೇಮಕಾತಿ ಆದೇಶ ನೀಡುವುದು ಬಾಕಿಯಿದೆ. ಇದನ್ನು ಹೊರತುಪಡಿಸಿ, ಉಳಿದ ಅರೆ ವೈದ್ಯಕೀಯ ಹುದ್ದೆಗಳ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ.<br>6. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ 1250 ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಹಾಗೂ 300 ಆರೋಗ್ಯ ನಿರೀಕ್ಷಣಾಧಿಕಾರಿ ಹುದ್ದೆಗಳ ಭರ್ತಿ ಮಾಡಲು ಪರಿಶೀಲಿಸಲಾಗುತ್ತಿದೆ.<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ನಿಧನ, ನಿವೃತ್ತಿ, ರಾಜೀನಾಮೆ, ಸ್ವ-ಇಚ್ಛಾ ನಿವೃತ್ತಿ ಮತ್ತು ಇತರೆ ಕಾರಣಗಳಿಂದ ಖಾಲಿಯಾಗುವ ವೈದ್ಯಾಧಿಕಾರಿ ಹುದ್ದೆಗಳನ್ನು ಕಾಲಕಾಲಕ್ಕೆ ನೇರ ನೇಮಕಾತಿ, ಗುತ್ತಿಗೆ/ಹೊರಗುತ್ತಿಗೆ ಆಧಾರದ ನೇಮಕಾತಿ, ಕಡ್ಡಾಯ ಸೇವೆ, ಪದೋನ್ನತಿ, ವರ್ಗಾವಣೆ ಮೂಲಕ ಭರ್ತಿ ಮಾಡುವ ಮೂಲಕ ಹುದ್ದೆಗಳ ಕೊರತೆಯಾಗದಂತೆ ಕ್ರಮವಹಿಸಲಾಗುತ್ತಿದೆ. |
| ಇ) | ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮೀಣ ಸೇವಾ ಬಾಂಡ್ ಯೋಜನೆಯನ್ನು ಜಾರಿಗೆ ತರಲಾಗಿದೆಯೇ<br>ಮತ್ತು ರಾಜ್ಯದ ಎಷ್ಟು ತಾಲ್ಲೂಕು ಆಸ್ಪತ್ರೆಗಳು 24X7 ಹೆರಿಗೆ ಸೇವೆ ನೀಡುತ್ತಿವೆ? (ಮಾಹಿತಿ ನೀಡುವುದು) | **ಹೌದು**<br><br>2025-2026ನೇ ಸಾಲಿನಲ್ಲಿ ಎಂ.ಬಿ.ಬಿ.ಎಸ್. ವ್ಯಾಸಂಗವನ್ನು ಪೂರ್ಣಗೊಳಿಸಿದ ನಂತರ 1 ವರ್ಷದ ಕಡ್ಡಾಯ ಸೇವೆ ಸಲ್ಲಿಸಲು ಒಟ್ಟು 1172 ವೈದ್ಯರುಗಳನ್ನು ಅವರುಗಳ ಅದ್ಯತೆಯನುಸಾರ ಆನ್ ಲೈನ್ ಸಮಾಲೋಚನೆ ಮೂಲಕ ದಿನಾಂಕ:18.08.2025 ಮತ್ತು 13.03.2026 ರಂದು ಸ್ಥಳನಿಯುಕ್ತಿಗೊಳಿಸಲಾಗಿರುತ್ತದೆ.<br><br>ರಾಜ್ಯದ ಎಲ್ಲಾ ತಾಲ್ಲೂಕು ಆಸ್ಪತ್ರೆಗಳು 24X7 ಹೆರಿಗೆ ಸೇವೆ ನೀಡುತ್ತಿವೆ. |

**ಸಂಖ್ಯೆ:ಆಕುಕ 14 HSD 2026**

**(ದಿನೇಶ್ ಗುಂಡೂರಾವ್)**
**ಆರೋಗ್ಯಮತ್ತುಕುಟುಂಬಕಲ್ಯಾಣ ಸಚಿವರು.**